# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **753 (961)** |
| **ಸದಸ್ಯರ ಹೆಸರು** | : | **ಶ್ರೀ ಅ. ದೇವೇಗೌಡ** |
| **ಉತ್ತರಿಸಬೇಕಾದ ದಿನಾಂಕ** | : | **22.02.2024** |
| **ಉತ್ತರಿಸಬೇಕಾದ ಸಚಿವರು** | : | **ಉಪ ಮುಖ್ಯಮಂತ್ರಿಯವರು** |

******

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಇಲ್ಲಿಯವರೆಗೆ ಪ್ಲಾಟ್‌ಗಳ ಹಂಚಿಕೆ ಮಾಡಿರುವ ವಿವರ ಹಾಗೂ ಇತ್ತೀಚೆಗೆ ನಿರ್ಮಾಣವಾಗಿರುವ ಪ್ಲಾಟ್‌ಗಳ ಸಂಖ್ಯೆ ಎಷ್ಟು; | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಇಲ್ಲಿಯವರೆಗೆ ಒಟ್ಟು 7,788 ಪ್ಲಾಟ್‌ಗಳನ್ನು ಹಂಚಿಕೆ ಮಾಡಲಾಗಿದೆ.<br><br>ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಇತ್ತೀಚಿಗೆ ಕೋನದಾಸಪುರ ಹಂತ-2 ರಲ್ಲಿ 2-ಬಿಹೆಚ್‌ಕೆ 672 ಫ್ಲಾಟ್‌ಗಳು ಹಾಗೂ ನಾಗರಭಾವಿ ಸರ್ವೆ ನಂ.103ರಲ್ಲಿ 3-ಬಿಹೆಚ್‌ಕೆ 120 ಫ್ಲಾಟ್‌ಗಳು ಸಾರ್ವಜನಿಕರ ಹಂಚಿಕೆಗೆ ಲಭ್ಯಪಡಿಸಲಾಗಿದೆ. |
| ಆ) | ಪೊಲೀಸ್ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಈ ಯೋಜನೆಯ ಅಡಿ ಮೀಸಲಾತಿ ಇದೆಯೇ; ಇದ್ದಲ್ಲಿ, ಎಷ್ಟು ಇದೆ; | ಪೊಲೀಸ್ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಈ ಯೋಜನೆಯಡಿ ಯಾವುದೇ ಮೀಸಲಾತಿ ಇರುವುದಿಲ್ಲ. |
| ಇ) | ಬಿಡಿಎ ದಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; ಖಾಲಿ ಇರುವ ಹುದ್ದೆಗಳನ್ನು ತುಂಬದಿರಲು ಕಾರಣಗಳೇನು? | ಪ್ರಾಧಿಕಾರದ ಸೇವೆಗೆ ಸೇರಿದ ಖಾಲಿ ಹುದ್ದೆಗಳ ವಿವರ ಕೆಳಕಂಡತಿದೆ.<br><br>1. ನೇರ ನೇಮಕಾತಿ ಹುದ್ದೆಗಳು: 176<br>2. ಮುಂಬಡ್ತಿ ಹುದ್ದೆಗಳು: 38<br>ಒಟ್ಟು 214<br><br>ಅಗತ್ಯಕ್ಕನುಗುಣವಾಗಿ ನೇರ ನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡಲು ಯೋಜಿಸಲಾಗಿದೆ.<br><br>ಮುಂಬಡ್ತಿಗೆ ಅರ್ಹ ನೌಕರರು ಲಭ್ಯವಿರುವುದಿಲ್ಲವಾದ್ದರಿಂದ, ಮುಂಬಡ್ತಿ ಹುದ್ದೆಗಳನ್ನು ಭರ್ತಿ ಮಾಡಿರುವುದಿಲ್ಲ. |

**ಸಂಖ್ಯೆ:ನಅಇ 43 ಬೆಂಭೂಸ್ವಾ 2024**

**(ಡಿ. ಕೆ. ಶಿವಕುಮಾರ್)**
**ಉಪ ಮುಖ್ಯಮಂತ್ರಿ**